File No.AGRI-AMS/15/2019-AGRI_PLAN_B-AGRICULTURE Secretariat

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2019-20ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ (PMKSY-OI-PDMC) ಯೋಜನೆಗೆ 2018-19ನೇ ಸಾಲಿನಲ್ಲಿ ಬಿಡುಗಡೆಗೆ ಬಾಕಿ ಉಳಿದಿದ್ದ ಮೂರನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಕೃಇ 41 ಕೃಯೋಕಾ 2019, ದಿನಾಂಕ: 02.04.2019.
2. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 18-10/2018-RFS-III, ದಿನಾಂಕ: 28.03.2019.
3. ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರ ಸಂಖ್ಯೆ: FD 20 BGL 2019 ದಿನಾಂಕ: 30.03.2019.
4. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 11-7/2017-RFS-III, ದಿನಾಂಕ: 30.04.2019.
5. ಜಲಾನಯನ ಅಭಿವೃದ್ಧಿ ಆಯುಕ್ತರ ಪ್ರಸ್ತಾವನೆ ಸಂಖ್ಯೆ: ಜಲಇ/ಲೆಕ್ಕ-5/PMKSY-WD&OI/Revalidation/2019-20, ದಿನಾಂಕ: 24.05.2019.

*****

ಪ್ರಸ್ತಾವನೆ:

2019-20ನೇ ಸಾಲಿನ ಆಯವ್ಯಯ ಸಂಪುಟ-3ರಲ್ಲಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ (PMKSY)-ಜಲಾನಯನ ಅಭಿವೃದ್ಧಿ ಯೋಜನೆ ಲೆಕ್ಕ ಶೀರ್ಷಿಕೆ: 2402-00-102-0-30 ಅಡಿ ಒಟ್ಟು ರೂ. 16600.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ, ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ (PMKSY)-ಜಲಾನಯನ ಅಭಿವೃದ್ಧಿ ಯೋಜನೆಯನ್ನು 2019-20ನೇ ಸಾಲಿಗೆ ಮುಂದುವರೆಸಲಾಗಿರುತ್ತದೆ.

ಮೇಲೆ ಓದಲಾದ (2)ರ ಕೇಂದ್ರ ಸರ್ಕಾರದ ಪತ್ರದಲ್ಲಿ, ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ (PMKSY-OI-PDMC) ಯೋಜನೆಗೆ ಕೇಂದ್ರ ಸರ್ಕಾರವು 3ನೇ ಕಂತಿನ ಅನುದಾನವನ್ನಾಗಿ ರೂ. 1903.00 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತದೆ.

ಮೇಲೆ ಓದಲಾದ (3)ರ ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರದಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ರೂ. 7500.00 ಲಕ್ಷಗಳು ರಾಜ್ಯದ ಬೊಕ್ಕಸಕ್ಕೆ ಜಮೆಯಾದ ಕುರಿತು ದೃಢೀಕರಿಸಲಾಗಿದೆ.

ಮೇಲೆ ಓದಲಾದ (4)ರ ಕೇಂದ್ರ ಸರ್ಕಾರದ ಪತ್ರದಲ್ಲಿ, 2018-19ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ-PDMC ಕಾರ್ಯಕ್ರಮದಡಿ ಬಿಡುಗಡೆಯಾಗಿ ವೆಚ್ಚ ಭರಿಸದೇ ಉಳಿತಾಯವಾದ ಅನುದಾನವನ್ನು ಮರುಮೌಲ್ಯೀಕರಿಸಿ 2019-20ನೇ ಸಾಲಿನ ಕಾರ್ಯಕ್ರಮಗಳಿಗೆ ಬಳಸಲು ಅನುಮತಿ ನೀಡಲಾಗಿದೆ.

ಮೇಲೆ ಓದಲಾದ (5)ರ ಜಲಾನಯನ ಅಭಿವೃದ್ಧಿ ಇಲಾಖೆ ಆಯುಕ್ತರ ಪ್ರಸ್ತಾವನೆಯಲ್ಲಿ, ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ-PDMC ಕಾರ್ಯಕ್ರಮದಡಿ 2018-19ನೇ ಸಾಲಿನಲ್ಲಿ

ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಮೂರನೇ ಕಂತಿನ ಅನುದಾನ ರೂ. 1903.00 ಲಕ್ಷಗಳು ಬಿಡುಗಡೆಗೆ ಬಾಕಿ ಉಳಿದಿದ್ದು, ಸದರಿ ಅನುದಾನವನ್ನು ಕೇಂದ್ರ ಸರ್ಕಾರವು 2018-19ರ ಆರ್ಥಿಕ ವರ್ಷದಲ್ಲಿ ಬಳಸುವಂತೆ ತಿಳಿಸಿ ಮರುಮೌಲ್ಯೀಕರಿಸಿರುತ್ತದೆ. ಸದರಿ ಮರುಮೌಲ್ಯೀಕರಣಗೊಂಡ ಅನುದಾನಕ್ಕೆ ರಾಜ್ಯದ ಸರ್ಕಾರದ ಪಾಲಿನ ಶೇ. 40ರಷ್ಟು ಅನುದಾನ ರೂ. 1268.6667 ಲಕ್ಷಗಳನ್ನು ಸೇರಿಸಿ ಒಟ್ಟು ರೂ. 3171.6667 ಲಕ್ಷಗಳನ್ನು ಈ ಕೆಳಕಂಡಂತೆ 2019-20ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ: 2402-00-102-0-30 ರಡಿಯ ಉಪ ಲೆಕ್ಕ ಶೀರ್ಷಿಕೆವಾರು ಬಿಡುಗಡೆ ಮಾಡಿ 2019-20ನೇ ಸಾಲಿನ ಅನುಮೋದಿತ ಕಾಮಗಾರಿಗಳ ಅನುಷ್ಠಾನಕ್ಕಾಗಿ ಬಳಸಲು ಅನುಮತಿ ನೀಡುವಂತೆ ಕೋರಲಾಗಿದೆ.

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಉಪ ಶೀರ್ಷಿಕೆ | ಕೇಂದ್ರದ ಪಾಲು | ರಾಜ್ಯದ ಪಾಲು | ಒಟ್ಟು |
|---|---|---|---|---|
| 1 | ಸಾಮಾನ್ಯ (139) | 1332.1000 | 888.0667 | 2220.1667 |
| 2 | ಸಾಮಾನ್ಯ ವೆಚ್ಚಗಳು (51) | 95.1500 | 63.4333 | 158.5833 |
| 3 | ಪರಿಶಿಷ್ಟ ಜಾತಿ (422) | 342.5400 | 228.3600 | 570.9000 |
| 4 | ಗಿರಿಜನ ಉಪ ಯೋಜನೆ (423) | 133.2100 | 88.8067 | 222.0167 |
| **ಒಟ್ಟು** | | **1903.0000** | **1268.6667** | **3171.6667** |

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 15 ಕೃಉಇ 2019, ಬೆಂಗಳೂರು, ದಿನಾಂಕ: 05.08.2019.**

ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ (PMKSY-OI-PDMC) ಅಡಿ 2018-19ನೇ ಸಾಲಿನಲ್ಲಿ ಬಿಡುಗಡೆಗೆ ಬಾಕಿ ಉಳಿದಿದ್ದ, ಮರುಮೌಲ್ಯೀಕರಣಗೊಂಡ ಕೇಂದ್ರದ ಪಾಲಿನ ಅನುದಾನ ರೂ. 1903.00 ಲಕ್ಷಗಳಿಗೆ ರಾಜ್ಯದ ಪಾಲಿನ ರೂ. 1268.6667 ಲಕ್ಷಗಳನ್ನು ಸೇರಿಸಿ ಒಟ್ಟಾರೆ **ರೂ. 3171.6667 ಲಕ್ಷಗಳನ್ನು (ಮೂರು ಸಾವಿರದ ನೂರ ಎಪ್ಪತ್ತೊಂದು ಲಕ್ಷದ ಅರವತ್ತಾರು ಸಾವಿರದ ಆರು ನೂರ ಎಪ್ಪತ್ತು ರೂಪಾಯಿಗಳು ಮಾತ್ರ)** 2019-20ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ: 2402-00-102-0-30ರಡಿ ಈ ಕೆಳಕಂಡಂತೆ ಉಪ ಶೀರ್ಷಿಕೆವಾರು ಬಿಡುಗಡೆ ಮಾಡುತ್ತಾ ಕಾರ್ಯಕ್ರಮ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಿದೆ.

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಉಪ ಶೀರ್ಷಿಕೆ | ಕೇಂದ್ರದ ಪಾಲು | ರಾಜ್ಯದ ಪಾಲು | ಒಟ್ಟು |
|---|---|---|---|---|
| 1 | ಸಾಮಾನ್ಯ (139) | 1332.1000 | 888.0667 | 2220.1667 |
| 2 | ಸಾಮಾನ್ಯ ವೆಚ್ಚಗಳು (51) | 95.1500 | 63.4333 | 158.5833 |
| 3 | ಪರಿಶಿಷ್ಟ ಜಾತಿ (422) | 342.5400 | 228.3600 | 570.9000 |
| 4 | ಗಿರಿಜನ ಉಪ ಯೋಜನೆ (423) | 133.2100 | 88.8067 | 222.0167 |
| **ಒಟ್ಟು** | | **1903.0000** | **1268.6667** | **3171.6667** |

ಜಲಾನಯನ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಕೇಂದ್ರ ಸರ್ಕಾರವು ಆಗ್ಗಿಂದಾಗ್ಗೆ ಹೊರಡಿಸುವ ಮಾರ್ಗಸೂಚಿ ಅನುಸಾರ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ/01/ಟಿಎಫ್ ಪಿ/2019, ದಿನಾಂಕ: 03.04.2019ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾಗಿರುವ ಆರ್ಥಿಕ ಅಧಿಕಾರದ ಮೇರೆಗೆ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 49 EXP-4/2019, ದಿನಾಂಕ: 11.07.2019ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

B S Nagaratnam

(ಬಿ.ಎಸ್. ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)
05/08/19

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ ಎಸ್ ಎ)/ (ಇ& ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01
2. ಪ್ರಧಾನ ಮಹಾಲೇಖಪಾಲರು ( ಎ & ಇ), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಕೃಷಿ ಆಯುಕ್ತರು/ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
7. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
8. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
9. ನಿರ್ದೇಶಕರು, TNMC, ಖನಿಜ ಭವನ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ (FR & CC), ಆರ್ಥಿಕ ಇಲಾಖೆ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ – 4&5), ಆರ್ಥಿಕ ಇಲಾಖೆ, ಬೆಂಗಳೂರು.
12. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
13. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.